

# ಅಡಿಕೆ ಹಾಳೆಗೆ ಪ್ರೊಮೋಶನ್!

**ಕನ್ನಾಡಿನ ಕೃಷಿ ಮೂಲದ ದಂಪತಿಯ ಅಡಿಕೆ ಹಾಳೆ ಉದ್ದಿಮೆ ಈಗ ದೇಶದ ಸುದ್ದಿ. ಅಡಿಕೆ ಹಾಳೆಯಿಂದ ತಯಾರಾಗುತ್ತಿರುವ ವಿವಿಧ ಆಲಂಕಾರಿಕ ಉತ್ಪನ್ನಗಳು ವಿದೇಶದಲ್ಲೂ ಬೇಡಿಕೆ ಗಿಟ್ಟಿಸಿಕೊಂಡಿವೆ.**

**ನಾ. ಕಾರಂತ ಪೆರಾಜೆ**



ಅಡಿಕೆ ಹಾಳೆಯಿಂದ ರೂಪುಗೊಂಡ ನೆಲಹಾಸು

“ಅಡಿಕೆ ಹಾಳೆಯಿಂದ ಮಾಡಿದ ಉತ್ಪನ್ನಗಳು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಪಡೆದಿವೆ. ಇದರ ಪಾದರಕ್ಷೆಗಳನ್ನು ಜನರು ಇಷ್ಟಪಡುತ್ತಿದ್ದಾರೆ. ಇದು ನಮ್ಮ ನೈಸರ್ಗಿಕ ಸಂಪನ್ಮೂಲ ಮತ್ತು ಸಾಂಪ್ರದಾಯಿಕ ಕೌಶಲಗಳ ಸಮರ್ಥ ಬಳಕೆಗೆ ಅತ್ಯುತ್ತಮ ಉದಾಹರಣೆ. ಭಾರತದ ಈ ಸಾಂಪ್ರದಾಯಿಕ ಜ್ಞಾನವನ್ನು ಇಡೀ ಜಗತ್ತು ಇಂದು ‘ಸುಸ್ಥಿರ ಭವಿಷ್ಯ’ಕ್ಕಾಗಿ ಎದುರು ನೋಡುತ್ತಿದೆ.”

ಪ್ರಧಾನಿ ನರೇಂದ್ರ ಮೋದಿ, ತಮ್ಮ ‘ಮನ್ ಕಿ ಬಾತ್’ ರೇಡಿಯೊ ಭಾಷಣದಲ್ಲಿ (2022ರ ಡಿಸೆಂಬರ್ 25) ಶಿವಮೊಗ್ಗದ ಸುರೇಶ್ ಎಸ್. ಆರ್. – ಮೈಥಿಲಿ ದಂಪತಿಯ ಉದ್ಯಮವನ್ನು ಹೀಗೆ ಶ್ಲಾಘಿಸಿದ್ದರು. ಸಾಧಕ ಕೃಷಿಕರೊಬ್ಬರನ್ನು ಪ್ರಧಾನಿಯವರು ಗುರುತಿಸಿದ್ದು ಕನ್ನಾಡಿಗೆ ಹೆಮ್ಮೆ ಹಾಗೂ ಅಭಿಮಾನದ ಸಂಗತಿ.

ಸುರೇಶ್ ಕೃಷಿಕರು. ಶಿವಮೊಗ್ಗದ ವಿನೋಬಾ ನಗರದವರು. ಪತ್ನಿ ಮೈಥಿಲಿ. ಈ ದಂಪತಿಯ ‘ಭೂಮಿ ಅಗ್ರಿ ವೆಂಚರ್ಸ್’ ಸಂಸ್ಥೆಯಿಂದು ದೇಶಮಟ್ಟದ ಸುದ್ದಿ. ಅಡಿಕೆ ಮರದ ಹಾಳೆಯ ಪಾದರಕ್ಷೆ, ಡೈರಿ, ಹ್ಯಾಂಡ್‌ಬ್ಯಾಗ್, ನೆಲಹಾಸುಗಳು ಕಡಲಾಚೆಗೂ ಹಾರಿವೆ.

2008ರಲ್ಲಿ ಹಾಳೆ ತಟ್ಟೆ ತಯಾರಿಯಿಂದ ಉದ್ದಿಮೆಗೆ ಶ್ರೀಕಾರ ಹಾಕಿದರು ಈ ದಂಪತಿ. ಯೂರೋಪ್, ಹಾಲೆಂಡ್, ಇಂಗ್ಲೆಂಡ್ ದೇಶಗಳಿಗೆ ತಟ್ಟೆಗಳನ್ನು ರಫ್ತು ಮಾಡಿದರು. ನಂತರ, ತಟ್ಟೆಯಲ್ಲದೆ ಆಲಂಕಾರಿಕ ವಸ್ತುಗಳ ತಯಾರಿಯತ್ತ ಯೋಚನೆ ಮಾಡಿದರು. ಹಾಳೆಯ ಗಡಸುತನ ಹೋಗದಿದ್ದರೆ, ಬೇಕಾದಂತೆ ಬಾಗದು. ಬಾಗದಿದ್ದರೆ ವಿನ್ಯಾಸಿಸಲು ಕಷ್ಟ. ಆ ಹೊತ್ತಿಗೆ ಹಿತೈಷಿಯೊಬ್ಬರಿಂದ ಹಾಳೆಯ ಗಟ್ಟಿತನವನ್ನು ಮೃದುಗೊಳಿಸುವ ಐಡಿಯಾ ದೊರೆಯಿತು!

## ಅಡಿಕೆ ಚರ್ಮ!

ಅಡಿಕೆ ಮರದ ಚರ್ಮ! ನಿಜಕ್ಕೂ ಕುತೂಹಲ. ಮೊದಲು ಹಾಳೆಯನ್ನು ತೊಳೆಯಲಾಗುತ್ತದೆ. ಜೈವಿಕ ದ್ರಾವಣವೊಂದರಲ್ಲಿ ಮೂರು ದಿನ ಮುಳುಗಿಸಬೇಕು. ನಂತರ ಮೂರು ದಿವಸ ನೆರಳಿನಲ್ಲಿ ಒಣಗಿಸಲಾಗುತ್ತದೆ. ಆಗ ಹಾಳೆಯು ಚರ್ಮದಂತೆ ಮೃದುಗುಣ ಪಡೆಯುತ್ತದೆ, ಜೊತೆಗೆ ಹೊಳಪು ಕೂಡ.

ಅಡಿಕೆ ಹಾಳೆಯು ಸಹಜವಾಗಿ ಮಧ್ಯ ಭಾಗದಲ್ಲಿ ದಪ್ಪಗಿದ್ದು, ಎರಡೂ ಕಡೆ ತೆಳುವಾಗಿರುತ್ತದೆ. ಇದನ್ನು ಒಂದೇ ರೀತಿಯ ದಪ್ಪಕ್ಕೆ ಪರಿವರ್ತಿಸುವ ಯಂತ್ರದ ಹುಡುಕಾಟ ಆರಂಭವಾಯಿತು. ತಮಿಳುನಾಡಿನ ಚರ್ಮ ಉದ್ದಿಮೆಯ ಕೇಂದ್ರದ ಸಂಪರ್ಕ ಸಾಧಿಸಿದರು. ಹದ ಬರಿಸಿದ ಅಡಿಕೆ ಹಾಳೆಗಳನ್ನು ‘ಟ್ಯಾನಿಂಗ್ ಯಂತ್ರ’ದಲ್ಲಿ ಒಂದೇ ರೀತಿಯ ದಪ್ಪಕ್ಕೆ ಮಾಡಬಹುದೆನ್ನುವ ಮಾಹಿತಿ ಸಿಕ್ಕಿತು. ಈ ಪ್ರಕ್ರಿಯೆಗೆ ‘ಥಿನ್ನಿಂಗ್’ ಎನ್ನುತ್ತಾರೆ.

2018–19. ಸುರೇಶರ ಹಾಳೆ ತಟ್ಟೆ ಉದ್ದಿಮೆಯು